ಶ್ರೀ ಕೆ. ಮಲ್ಲಪ್ಪ.—ಅಂಗ್ಲೋ ಅಮೆರಿಕನ್ ಕನ್‌ಸೊರ್‌ಷಿಯಂ ಟೀಂನ ಎಕ್ಸ್‌ಪರ್ಟುಗಳು ಇನ್ನು ಎರಡು ಮೂರು ತಿಂಗಳಲ್ಲಿ ಬರಬೇಕೆಂದು ಇಂಡಿಯಾ ಸರಕಾರದವರಲ್ಲಿ ಒಪ್ಪಂದ ಮಾಕೊಂಡಿದ್ದಾರೆ, ಆದರಂತೆ ಇಲ್ಲಿಗೂ ಬರುವುದರಲ್ಲಿದ್ದಾರೆ.

Procurement of marketable surplus of foodgrains

*Q.—104. Sri V. S. LAKSHMIKANTHAPPA (Sagar).—

Will the Government be pleased to state.—

(*a*) whether they intend to procure the entire quantity of marketable surplus of foodgrains that comes under the Foodgrains Declaration Order, 1964;

(*b*) whether they have taken necessary steps to protect the interest of the grower to sell his surplus stock at reasonable prices as and when he desires?

A.—Sri M. V. KRISHNAPPA (Minister for Revenue).—

(*a*) No.
(*b*) Yes.

ಶ್ರೀ ವಿ. ಎಸ್. ಲಕ್ಷ್ಮಿಕಾಂತಪ್ಪ.—ಹಿಂದೆ ಕಂಟ್ರೋಲ್ ಇದ್ದ ಕಾಲದಲ್ಲಿ ಹಾಗೂ ಪ್ರಿ ಇಂಡಿಪೆಂಡೆನ್ಸ್ 1958—59ರ ಸ್ಕೀಮಿನಲ್ಲಿ ಭತ್ತದ ದರಗಳನ್ನು ನಿಗದಿ ಮಾಡುವಾಗ ದಬ್ಬಣಸಾಲ ಬತ್ತಕ್ಕೆ ಒಂದು ದರ, ಶಿವಮೊಗ್ಗದ ಬತ್ತಕ್ಕಾಗಿ ಒಂದು ದರ ಹಾಗೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಭತ್ತಕ್ಕೆ ನಿಗದಿ ಮಾಡಿರುವ ದರ ಬಹಳ ಕಡಿಮೆಯಾಗಿದೆ. ಇದರಿಂದಾಗಿ ಬೆಳೆಯುವವರಿಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ಈ ಬಗ್ಗೆ ಭತ್ತ ಬೆಳೆಯುವವರಿಗೆ ಹೆಚ್ಚು ಬೆಲೆ ಸಿಗುವಂತೆ ಸರಕಾರ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತದೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—1958ನೇ ಇಸವಿಯಲ್ಲಿ ಅಲ್ಲಿ ಬೆಳೆಯುತ್ತಿದ್ದ ದಬ್ಬಣ ಸಾಲಾ ಭತ್ತಕ್ಕೆ 6 ರೂಪಾಯಿಗಳಿತ್ತು. ಅದನ್ನು ಈಗ ಬೆಲೆ ನಿಗದಿ ಮಾಡುವಾಗ 20 ರೂಪಾಯಿಗಳು ಒಂದು ಪಲ್ಲ ದಬ್ಬಣಸಾಲಾ ಭತ್ತಕ್ಕೆ ಎಂದು ನಿಗದಿ ಮಾಡಿದ್ದುದನ್ನು ಈಗ ಪುನಃ ಪ್ರೊಕ್ಯೂರ್‌ಮೆಂಟು ಆರ್ಡರ್ ಮಾಡುವಾಗ 30 ರೂಪಾಯಿಗಳು ಒಂದು ಪಲ್ಲಕ್ಕೆ ಇರಬೇಕೆಂದು ಮಾಡಲಾಗಿದೆ, ಇದನ್ನೂ ಕಡಿಮೆ ಎಂದು ಮಾನ್ಯ ಸದಸ್ಯರು ಈಗ ಹೇಳುವುದಾದರೆ ಅಂತಹವರನ್ನು ಜನಗಳೇ ನೋಡಿಕೊಳ್ಳಬೇಕು.

ಶ್ರೀ ವಿ. ಎಸ್. ಲಕ್ಷ್ಮಿಕಾಂತಪ್ಪ.—ದಬ್ಬಣಸಾಲಾ ಭತ್ತಕ್ಕೆ 20 ರೂಪಾಯಿಗಳಿಂದ 30 ರೂಪಾಯಿಗಳಷ್ಟು ಎಂದು ಮಾಡಿದ್ದರೂ ಕೂಡ ಭತ್ತ ಬೆಳೆಯುವವರಿಗೆ ಹೇಗಾಗಿದೆ ಎಂದರೆ ದಬ್ಬಣ ಸಾಲಾಕ್ಕೂ ಒಂದೇ ದರ, ಶಿವಮೊಗ್ಗದ ಮೀಡಿಯಾದು ಗಿದ್ದು ಎನ್ನುವ ಭತ್ತದ ದರಕ್ಕೂ ಒಂದೇ ದರ ಮಾಡಬೇ 7—8 ರೂಪಾಯಿಗಳಷ್ಟು ವ್ಯತ್ಯಾಸಗಳಿವೆ. ಇದನ್ನು ಸರಿಮಾಡುವುದಕ್ಕಾಗುವುದಿಲ್ಲವೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಸಣ್ಣ ಭತ್ತಕ್ಕೂ ತಮ್ಮ ಕಡೆ ಇರುವ ಭತ್ತಕ್ಕೂ 7—8 ರೂಪಾಯಿಗಳಷ್ಟು ವ್ಯತ್ಯಾಸ ಇಟ್ಟಿದ್ದೇವೆ. 1958-59 ರಲ್ಲಿ ಕಂಟ್ರೋಲು ಇದ್ದಾಗಲೂ ಕೂಡ ಇಷ್ಟು ರೇಟು ಇರಲಿಲ್ಲ, ಎಂದು ಹೇಳಿದರೆ ನಾವೇನು ಹೇಳುವುದು? ಯಾವಾಗಲೂ ಭತ್ತದಲ್ಲಿ ನಾನಾ ವೆರೈಟಿಗಳಿರುತ್ತವೆ. ಅದನ್ನು ನೋಡಿಕೊಂಡು ದರಗಳನ್ನು ನಿಗದಿ ಮಾಡುತ್ತಾರೆ. ನಿಮ್ಮ ಕಡೆ ಬರುವ ದಬ್ಬಣಸಾಲಾ ಭತ್ತವನ್ನು ಸ್ಟ್ಯಾಂಡರ್ಡ್ ಕೋರ್ಸ್ ವೆರೈಟಿ ಎಂದು ಮಾಡಲಾಗಿದೆ. ಅದಕ್ಕಿಂತ ಸಣ್ಣ ಭತ್ತದ ಬೆರೆ ಸ್ವಲ್ಪ ಜಾಸ್ತಿಯಾಗಿ ಇಡಲಾಗಿದೆ. ಇದಕ್ಕಿಂತ ಹೆಚ್ಚಿಗೆ ಏನೂ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ದಪ್ಪ ಭತ್ತ ಎಂದು ಶಿವಮೊಗ್ಗ ಜಿಲ್ಲೆಯಲ್ಲಿ ಬಹುದಿವಸಗಳಿಂದ ಬೆಳೆಯುತ್ತಿದ್ದುದನ್ನು ವ್ಯವಸಾಯ ಇಲಾಖೆಯವರು ಕ್ರಾಸ್ ಬ್ರೀಡ್ ಮಾಡಿ ಈಗ ಉತ್ತಮ ದರ್ಜೆ ಭತ್ತವೆಂದು ಬೆಳೆಯುತ್ತಿದ್ದಾರೆ. ಅದೇ ಭತ್ತ ಮುಂಗಾರಿನಲ್ಲಿ ಹಾಗೂ ಧಾರವಾಡ ಜಿಲ್ಲೆಯಲ್ಲಿ

ರಾಶಿ ಮುಗದಂ ಎನ್ನುವ ಬೇರೇ ಹೆಸರಿನಲ್ಲಿ ತರೆದುಕೊಂಡು ಅಲ್ಲಿ ಒಂದು ಪಲ್ಲ. ಭತ್ತಕ್ಕೆ 43 ರಿಂದ 45ರ ವರೆಗೆ ಎಂದು ನಿಗದಿ ಮಾಡಿ ಸರಕಾರದವರು ಕೊಳ್ಳುತ್ತಿದ್ದಾರೆ. ಇಲ್ಲಿರುವ ಭತ್ತವನ್ನೇ ಕ್ಯಾನುಬ್ರೀಡ್ ಮಾಡಿ ಒಂದೇ ರೀತಿಯಾದ ಭತ್ತಕ್ಕೆ ಬೇರೆ ಬೇರೇ ಜಾಗದಲ್ಲಿ ಬೇರೆ ದರಗಳನ್ನು ನಿಗದಿ ಮಾಡಿದರೆ ಸರಿಯಾಗಿರುತ್ತದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರು ಹೇಳುತ್ತಿರುವಂತೆ ನಾನು ಹಿಂದೆ ಶಿವಮೊಗ್ಗ ಜಿಲ್ಲೆಗೆ ಬಂದಿದ್ದಾಗ ಮಾನ್ಯ ಸದಸ್ಯರಾದ ಶ್ರೀಮಾನ್ ಲಕ್ಷ್ಮಿಕಾಂತಪ್ಪನವರು ಹಾಗೂ ಇನ್ನಿತರ ಅನೇಕ ಮಾನ್ಯ ಸದಸ್ಯರುಗಳು ಬಂದು ಇದರ ಸ್ಯಾಂಪಲನ್ನು ತೋರಿಸಿ ಹೇಳಿದರು. ಅವರು ಹೇಳುವಂತೆ ಮಂಗಳೂರಿನಲ್ಲಿ ಮಸ್‌ಕಿಟ್ ಮತ್ತು ಧಾರವಾಡದಲ್ಲಿ ಮುಗದ್ ಭತ್ತ ಎಂದು ಮತ್ತು ತಮ್ಮ ಕಡೆ ದಬ್ಬಣ ಸಾಲಾ ಎಂದು ಮೂರು ತರಹ ಹೆಸರಿರುವ ಭತ್ತದ ಸ್ಯಾಂಪಲ್ಲುಗಳನ್ನೂ ಅಗ್ರಿಕಲ್‌ಚರಲ್ ರೀಸರ್ಚ್ ಇನ್‌ಸ್ಟಿಟ್ಯೂಟಿಗೆ ಪರೀಕ್ಷಲನೆಗಾಗಿ ಕಳುಹಿಸಲಾಗಿದೆ. ಅದರ ಬಗ್ಗೆ ಅವರು ವರದಿ ಕಳುಹಿಸುವುದರಲ್ಲಿದ್ದಾರೆ. ಅದನ್ನು ನೋಡಿಕೊಂಡು ಮುಂದೆ ಏನು ಮಾಡಬೇಕೋ ನೋಡಬೇಕು. ನಿಮ್ಮ ಕಡೆ ಇರುವ ಭತ್ತದ ಹೆಸರು ಚೆನ್ನಾಗಿಲ್ಲ. ದಬ್ಬಣಸಾಲಾ ಎನ್ನುವುದಕ್ಕೆ ಬದಲಾಗಿ 'ಸುಂದರ ಸಾಲಾ' ಎಂದು ಇಟ್ಟರೆ ಸರಿಯಾಗಿರುತ್ತಿತ್ತು. ಹೆಸರೇ ಬಹಳ ಮುಖ್ಯವಾದುದು, ತಾವು ನೋಡಿರುವ ಹಾಗೆ ಹೆಣ್ಣುಮಕ್ಕಳ ಹೆಸರನ್ನು ಮಾರವ್ವ, ಮಸಣವ್ವ ಎಂದು ಇಟ್ಟರೆ ಸರಿಯಾಗಿರುವುದಿಲ್ಲ ಎಂದು ಚೆನ್ನಾಗಿರುವ ಹೆಸರನ್ನು ಇಡುತ್ತಾರೆ. ಆದುದರಿಂದ ಹೆಸರು, ಈಗ ನಿಮ್ಮಲ್ಲಿರುವುದು ಕಷ್ಟವಾಗಿದೆ. (ನಗು)

Sri SANJEEVANATH AIKALA.—The answer to question (*b*) is 'Yes'. - What are the steps you have taken to protect the interests of the growers ?

Sri M. V. KRISHNAPPA.—We consider that the price fixed by the Government is a reasonable and fair price and Government is prepared to take at any time if the farmer wants to sell to the Government. When nobody is prepared to take from him, the Government is prepared.

ಶ್ರೀ ಬಿ. ಭಾಸ್ಕರ ಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗಿಡ್ಡ ಭತ್ತ ಎಂದಿರುವುದನ್ನು 36 ರೂಪಾಯಿಗಳಷ್ಟು ಒಂದು ಕ್ವಿಂಟಾಲಿಗೆ ಎಂದು ನಿಗದಿ ಮಾಡಿರುವುದು ಬಹು ಕಡಿಮೆ ಇದನ್ನು ಹೆಚ್ಚು ಮಾಡಬೇಕೆಂದು ಸರಕಾರಕ್ಕೆ ಅಲ್ಲಿನ ಮುಖಂಡರುಗಳಿಂದಾಗಲೀ ಕೋ-ಆಪರೇಟಿವ್ ಸೊಸೈಟಿಗಳಿಂದಾಗಲೀ ಮನವಿಗಳು ಬಂದಿವೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸಾಕಷ್ಟು ಕ್ಯಾನರಾದಿಂದ ನಮಗೇನೂ ಭತ್ತ ಯಾವ ದರ ನಿಗದಿ ಮಾಡಿದರೂ ಬರುವುದಿಲ್ಲ. ಅಲ್ಲಿಂದ ಎಲ್ಲ ಹೊರಕ್ಕೇ ಹೊರಟುಹೋಗುತ್ತದೆ. ಎಲ್ಲ ಕಡೆಗಳಿಂದಲೂ ನುಮಾರು ಆರುನೂರು ವೆರೈಟಿಗಳ ಭತ್ತ ಇಪೆ ಎಂದು ನಾವು ಎಲ್ಲವನ್ನೂ ಕ್ಲಾಸಿಫೈ ಮಾಡುವುದು ಕಷ್ಟ, ಕೊಡಗು ಭಾಗದಲ್ಲಿ ಕರಿ ಬಳಿಯ ಹಾಗೂ ಬಳಿಯ ಕರಿಯ ಎನ್ನುವ ಭತ್ತ ಇದೆ, ಇದಕ್ಕೆಲ್ಲಾ ಬೆಲೆ ನಿಗದಿ ಮಾಡುವುದು ಕಷ್ಟ. ಇದನ್ನೆಲ್ಲಾ ಅಗ್ರಿಕಲ್ಚರ್ ಇಲಾಖೆಯ ಎಕ್ಸ್‌ಪರ್ಟುಗಳು ಹೇಳಬೇಕು.

Crushing Capacity of the Thungabhadra Sugar Factory.

*Q.—141. Sri T. D. DEVENDRAPPA (Bhadravathi).—

Will the Government be pleased to state :—

(*a*) the present crushing capacity per day of the Thungabhadra Sugar Factory and the quantity of sugarcane crushed per day in the past ;

(*b*) the extent of area under sugarcane cultivation in Bhadravati, Shimoga, Channagiri and Honali Taluks during the year 1964 ;

(*c*) whether it is not a fact that the ryots are put to loss as it is not possible to crush the heavy quantity of sugarcane grown in that area in that factory ;